# ನಾಳೆಯಿಂದ ನವೋದ್ಯಮಿ ಸಂತೆ

**ಧಾರವಾಡ:** ನಗರದ ಕೆಲಗೇರಿ ರಸ್ತೆಯ ಬನಶಂಕರಿ ಕಲಾಮಂಟಪದಲ್ಲಿ ಸೆ. 13ರಿಂದ 15ರವರೆಗೆ ನವೋದ್ಯಮಿ ಸಂಸ್ಥೆಯ ವತಿಯಿಂದ ಸಣ್ಣ ಉದ್ದಿಮೆದಾರರಿಗಾಗಿ ನವೋದ್ಯಮಿ ಸಂತೆಯನ್ನು ಆಯೋಜಿಸಲಾಗಿದೆ. ಸಂತೆಯಲ್ಲಿ ಸಾವಯವ ಪದಾರ್ಥಗಳು, ವಿವಿಧ ಬಗೆಯ ತಿಂಡಿಗಳು, ಸಿರಿಧಾನ್ಯಗಳು, ಕೈಮಗ್ಗದ ಸೀರೆಗಳು ಮತ್ತು ಉಡುಪುಗಳು, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಲಭ್ಯವಿರುತ್ತದೆ. ಸಂತೆಯಲ್ಲಿ ಮಳಿಗೆ ಹಾಕಲು ಬಯಸುವವರು ಮೊ. 8618650819 ಸಂಪರ್ಕಿಸಬಹುದು ಎಂದು ನೀರಜಾ ಪಟವಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.